**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017 ಫ್ರಾ.ಸಾ.11**

**ಚಾ.ಸಾ.6**

ಸಾಕ್ಷಿದಾರರ ಹೆಸರು - ಅನನ್ಯ
ತಂದೆಯ ಹೆಸರು - ಸಂತೋಷ್ ನಾಯಕ್
ವಯಸ್ಸು - 15 ವರ್ಷ
ಉದ್ಯೋಗ - ವಿದ್ಯಾರ್ಥಿನಿ
ವಿಳಾಸ - ಕೊಂಡಾಡಿ

ದಿನಾಂಕಃ 30-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಮೃತ ಸಂತೋಷ ನಾಯಕ್ ನನ್ನ ತಂದೆ. ಅವರು ಈಗ ಮೃತ ಪಟ್ಟಿದ್ದಾರೆ. ಅವರು ಹೇಗೆ ಮೃತ ಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಚಾಸಾ 1 ರವರು ನನ್ನ ತಾಯಿ. ಚಾಸಾ 2 ರಿಂದ ಚಾಸಾ 5 ಮತ್ತು ಚಾಸಾ 7 ರವರು ನನ್ನ ತಂದೆಯ ಕುಟುಂಬಸ್ಥರು. ಆರೋಪಿಗಳ ಪರಿಚಯ ಇಲ್ಲ. ನನ್ನ ತಂದೆಯ ಕೊಲೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾನು ನನ್ನ ತಂದೆಯ ಮನೆಯಲ್ಲಿ ವಾಸವಾಗಿದ್ದಾಗ ಯಾರು ಬಂದು ನಮ್ಮನ್ನು ಅಪಹರಿಸಿ ಗಲಾಟೆ ಮಾಡಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ**

2017 ರಲ್ಲಿ ನಾನು ನನ್ನ ತಂದೆಯ ಮನೆಯಲ್ಲಿ ಇದ್ದಾಗ ಮಧ್ಯರಾತ್ರಿ ಸುಮಾರು 4 5 ಜನ ಬಂದು ಗಲಾಟೆ ಮಾಡಿ, ಮನೆಯ ಸಾಮಾನು ಗಳನ್ನು ಎಳೆದು ಹಾಕಿ ಕಪಾಟನ್ನು ತೆಗೆದು, ಪೇಪರ್ ನ್ನು ಎಳೆದು ಹಾಕಿ ನಂತರ ನಮ್ಮ ಮನೆಯ ಎದುರಿನ ದೇವಸ್ಥಾನಕ್ಕೆ ಹೋಗಿ, ದೇವಸ್ಥಾನದ

ನೆಲವನ್ನು ಅಗೆದು, ನನ್ನ ತಾಯಿ, ಅಜ್ಜಿ ದೊಡ್ಡಮ್ಮ ಚಿಕ್ಕಪ್ಪ ಇವರಿಗೆ ಮರದ ದೊಣ್ಣೆಯಿಂದ ಮತ್ತು ಗನ್ನಿನಿಂದ ಹಲ್ಲೆ ಮಾಡಿ, ನಂತರ ಬಂದವರು ನನ್ನ ಅಣ್ಣನನ್ನು ಹಾಗೂ ನನ್ನನ್ನು, ನನ್ನ ತಾಯಿ, ಅಜ್ಜಿ ತಾಯಿ, ದೊಡ್ಡಮ್ಮ ನನ್ನನ್ನು ಎಳೆದುಕೊಂಡು ಕಾರಿನಲ್ಲಿ ಹಾಕಿ ಒಂದು ಮನೆಗೆ ಕರೆದುಕೊಂಡು ಹೋಗಿ ನಂತರ ಚಿಕ್ಕಪ್ಪನನ್ನು ಕೂಡ ಎಳೆದುಕೊಂಡು ಬಂದು, ಅಲ್ಲಿಂದ ಅದೇ ಕಾರಿನಲ್ಲಿ ಅಲ್ಲಿಯೇ ಹತ್ತಿರ ಇರುವ ಇನ್ನೊಂದು ಮನೆಗೆ ಕರೆದುಕೊಂಡು ಹೋಗಿ, ಆ ಮನೆಯಲ್ಲಿ ಇದ್ದವರು ಬೇರೆ ಕಡೆ ಕರೆದುಕೊಂಡು ಹೋಗಲು ತಿಳಿಸಿದ್ದರಿಂದ ನಮ್ಮೆಲ್ಲರನ್ನು ಇನ್ನೊಂದು ಮನೆಗೆ ಕರೆದುಕೊಂಡು ಹೋಗಿ, ನನ್ನ ತಂದೆ ಅಲ್ಲಿ ಇದ್ದವರಿಗೆ ಹಣ ಕೊಡಲು ಬಾಕಿ ಇದೆ ಎಂದು ಹೇಳಿ ಜಾಗವನ್ನು ಅವರ ಹೆಸರಿಗೆ ಬರೆದುಕೊಡುವಂತೆ ಚಿಕ್ಕಪ್ಪನಿಗೆ ಪಿಸ್ತೂಲು ತೋರಿಸಿ ಹೆದರಿಸಿ, ನನ್ನ ಅಮ್ಮ ಹಾಗೂ ದೊಡ್ಡಮ್ಮನ ಮೈ ಮೇಲೆ ಇದ್ದ ಚಿನ್ನ ವನ್ನು ಬಿಚ್ಚಿ ಕೊಡುವಂತೆ ಹೇಳಿ ಹೆದರಿಸಿ ತೆಗೆದುಕೊಂಡಿದ್ದು, ನಂತರ ನಮ್ಮನ್ನು ಮನೆಗೆ ಬಿಟ್ಟು ಹೋಗಿದ್ದು, ನಂತರ ವಿಚಾರ ತಿಳಿಯಲಾಗಿ ಈ ಆರೋಪಿತರ ನನ್ನ ತಂದೆಯನ್ನು ಕೊಲೆ ಮಾಡಿ ಅವರ ದೇಹವನ್ನು ಒಂದು ಕಡೆ ನೀರು ಇಲ್ಲದ ಪಾಳು ಬಾವಿಯಲ್ಲಿ ಹೂತು ಹಾಕಿರುತ್ತಾರೆ ಎಂದು ನನ್ನ ಅಮ್ಮ ತಿಳಿಸಿರುತ್ತಾರೆ ಎಂದು ಇರುವ ಹೇಳಿಕೆಯನ್ನು ಸಾಕ್ಷಿಗೆ ಓದಿ ಹೇಳಲಾಗಿ, ತಾನು ಆ ರೀತಿ ಹೇಳಿಕೆಯನ್ನು ನೀಡಿಲ್ಲ ಎಂದು ನುಡಿದುರತ್ತಾರೆ. ಆದ್ದರಿಂದ ಸಾಕ್ಷಿಯ ಹೇಳಿಕೆಯನ್ನು ನಿಪಿ 30 ಎಂದು ಗುರುತಿಸಲಾಯಿತು. ಆ ದಿನ ನಮಗೆ ಬೆದರಿಸಿದ ಆರೋಪಿತರು ಈ ದಿನ ನ್ಯಾಯಾಲಯದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಆರೋಾಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ** ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.